## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ದಿ:22-08-2016

ಸಂ.ಕಂ/ಹಬ/ವಿವಾದ/14/2015-16

ವಾದಿಗಳು

1.ಜಿ.ಚಂದ್ರಶೇಖರರೆಡ್ಡಿ ತಂದೆ ಮಲ್ಲಾರೆಡ್ಡಿ

ತಾಳೂರು ಗ್ರಾಮ.

2.ಕೊಮಟರ ಗುರುಸ್ವಾಮಿ ತಂದೆ ಭೀಮಯ್ಯ

ಜಿಪಿಎ, ಹೋಲ್ಡರ್ ಜೆ.ವೆಂಕಟರೆಡ್ಡಿ ತಂದೆ ನರಸನಗೌಡ

ವಾರ್ಡ್ ನಂ:18 ಮನೆ ನಂ:116 ಬಳ್ಳಾರಿ.

ವಿರುದ್ದ

ಪ್ರತಿವಾದಿಗಳು

ಗುರುಸ್ವಾಮಿಶೆಟ್ಟಿ ತಂದೆ ಭೀಮಯ್ಯ

ಎ.ಕೆ.ಹಾಳು ಗ್ರಾಮ. ಸಿರುಗುಪ್ಪ (ತಾ)

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಮಾಟೂರು | 122/ಬಿ/1 | 1-70 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಮಾಟೂರು ಗ್ರಾಮದ ಸ,ನಂ.122/ಬಿ/1 ವಿ:1-70 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ **ಕೊಮಟರ ಗುರುಸ್ವಾಮಿ ತಂದೆ ಭೀಮಯ್ಯ** ಹೆಸರಿಗೆ ಪಟ್ಟಾ ಇದ್ದು, ನೋಂದಣಿ ಜಿಪಿಎ ಹೋಲ್ಡರ್ ಸಂಖ್ಯೆ:399/10-11 ದಿ:06-12-2010 ರ ಪ್ರಕಾರ **ಜೆ.ವೆಂಕಟರೆಡ್ಡಿ ತಂದೆ ನರಸನಗೌಡ** ಇವರಿಗೆ ಸಾಮಾನ್ಯ ಅಧಿಕಾರ ಪತ್ರ ನೀಡಿರುವ ಮೇರೆಗೆ, ಇವರಿಂದ ನೋಂದಣಿ ಕ್ರಯ ಪತ್ರ ಸಂಖ್ಯೆ:7310-2014-15 ದಿನಾಂಕ: 20-03-2015 ರ ಪ್ರಕಾರ **ಜಿ.ಚಂದ್ರಶೇಖರರೆಡ್ಡಿ ತಂದೆ ಮಲ್ಲಾರೆಡ್ಡಿ** ಇವರು ಕ್ರಯ ಹೊಂದಿರುವ ಮೇರೆಗೆ, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಮಾಟೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಯ ಮುಂಚೆ **ಗುರುಸ್ವಾಮಿಶೆಟ್ಟಿ ತಂದೆ ಭೀಮಯ್ಯ** ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿನಾಂಕ:18-04-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:34/2014-15 ದಿ:02-05-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:24-07-2015 ರಿಂದ ದಿ:14-12-2015 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಯರು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ. ದಿ:14-12-2015 ರಂದು ಪ್ರತಿವಾದಿಯ ಮಗ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಲಾಗಿ, ತಕರಾರುದಾರರ ಅರ್ಜಿ ಪ್ರಕಾರ ಸದ್ರಿ ಜಮೀನನ್ನು ತಾವು ಪಂಪಸೆಟ್ ವ್ಯವಸ್ಥೆ ಮಾಡಲು ಮತ್ತು ನಿರ್ವಹಣೆಗಾಗಿ ಮಾತ್ರ ಜಿಪಿಎ ಅಧಿಕಾರ ನೀಡಿದ್ದು, ಸದ್ರಿ ಪಂಪಸೆಟ್ ವ್ಯವಸ್ಥೆ ಮಾಡದೇ ತಾನು ನೀಡಿದ ಜಿಪಿಎ ಅಧಿಕಾರ ಪತ್ರವನ್ನು ದುರುಪಯೋಗ ಮಾಡಿಕೊಂಡು ತಮ್ಮ ಗಮನಕ್ಕೆ ತರದೇ ಜಿ.ಚಂದ್ರಶೇಖರರೆಡ್ಡಿ ತಂದೆ ಮಲ್ಲಾರೆಡ್ಡಿ ಇವರಿಗೆ ಮಾರಾಟ ಮಾಡಿರುತ್ತಾರೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಸದ್ರಿ ಪ್ರಕರಣದ ವಿಚಾರಣೆಗೆ ಉಭಯತರೂ ಗೈರು ಹಾಜರಾಗಿದ್ದು, ಲಭ್ಯ ದಾಖಲೆ ಪ್ರಕಾರ ಸದ್ರಿ ಪ್ರಕರಣವು ಜಿಪಿಎ ಮೂಲಕ ಕ್ರಯ ವ್ಯವಹಾರವಾಗಿದ್ದು, ಸದ್ರಿ ವಹಿವಾಟಿಗೆ ಹಾಲಿ ಪಟ್ಟಾದಾರರೇ ಆಕ್ಷೇಪಣೆ ವ್ಯಕ್ತಪಡಿಸಿರುವುದರಿಂದ, ಸದ್ರಿ ಪ್ರಕರಣ ಸಿವಿಲ್ ಸ್ವರೂಪ ಎಂದು ಪರಿಗಣಿಸಿ, ಜಿಪಿಎ ಅಧಿಕಾರ ಪತ್ರ ಹಾಗೂ ಕ್ರಯಪತ್ರದ ನೈಜತೆ ಕುರಿತು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ವಹಿವಾಟನ್ನು ವಿಲೇಗೊಳಿಸಿ, ಈ ನ್ಯಾಯಾಲಯದ ಪ್ರಕರಣವನ್ನು ಮುಕ್ತಾಯಗೊಳಿಸಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/14/2015-16** **ದಿ:22-08-2016**

**ಆದೇಶ**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಮಾಟೂರು ಗ್ರಾಮದ ಸ,ನಂ.122/ಬಿ/1 ವಿ:1-70 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ **ಕೊಮಟರ ಗುರುಸ್ವಾಮಿ ತಂದೆ ಭೀಮಯ್ಯ** ಹೆಸರಿಗೆ ಪಟ್ಟಾ ಇದ್ದು, ನೋಂದಣಿ ಜಿಪಿಎ ಹೋಲ್ಡರ್ ಸಂಖ್ಯೆ:399/10-11 ದಿ:06-12-2010 ರ ಪ್ರಕಾರ **ಜೆ.ವೆಂಕಟರೆಡ್ಡಿ ತಂದೆ ನರಸನಗೌಡ** ಇವರಿಗೆ ಸಾಮಾನ್ಯ ಅಧಿಕಾರ ಪತ್ರ ನೀಡಿರುವ ಮೇರೆಗೆ, ಇವರಿಂದ ನೋಂದಣಿ ಕ್ರಯ ಪತ್ರ ಸಂಖ್ಯೆ:7310-2014-15 ದಿನಾಂಕ: 20-03-2015 ರ ಪ್ರಕಾರ **ಜಿ.ಚಂದ್ರಶೇಖರರೆಡ್ಡಿ ತಂದೆ ಮಲ್ಲಾರೆಡ್ಡಿ** ಇವರು ಕ್ರಯ ಹೊಂದಿರುವ ಕ್ರಯಪತ್ರದ ಹಾಗೂ ಜಿಪಿಎ ಅಧಿಕಾರ ಪತ್ರದ ನೈಜತೆ ಕುರಿತು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿ ಪರಿಹಾರ ಕಂಡುಕೊಳ್ಳಲು ತಿಳಿಸಿ ವಹಿವಾಟನ್ನು ವಿಲೇಗೊಳಿಸಿ, ಈ ನ್ಯಾಯಾಲಯದ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:22-08-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ

2.ವಾದಿ-ಪ್ರತಿವಾದಿಗಳಿಗೆ

3.ಕಛೇರಿ ಕಡತಕ್ಕೆ